ಶ್ರೀ ಎಸ್. ಸುಬ್ಬಯ್ಯನಾಯಕ್.—ಕೊಡಗು ರಾಜ್ಯದ ತೋಟಗಳು ಯಾರ ಅಧೀನದಲ್ಲಿವೆ ?

ಶ್ರೀ ಕೆ. ಎಫ್. ಪಾಟೀಲ್.—ಯಾರ ಯಾರ ಅಧೀನದಲ್ಲಿದೆ ಎನ್ನುವ ಲೆಕ್ಕ ಸಿಕ್ಕಲಿಲ್ಲ. Acreage ಮತ್ತು quantity produced ಇವುಗಳ ಲೆಕ್ಕ ಮಾತ್ರ ಸಿಕ್ಕಿದೆ.

ಶ್ರೀ ಕುಂದೂರು ರುದ್ರಪ್ಪ.—ಯಾರ ಸ್ವಾಧೀನದಲ್ಲಿದೆ ಎನ್ನುವುದು ಗೊತ್ತಿಲ್ಲವೆಂದರೆ ಆ ತೋಟಗಳಿಗೆ ವಾರಸುದಾರರು ಯಾರೂ ಇಲ್ಲವೆ ?

ಶ್ರೀ ಕೆ. ಎಫ್. ಪಾಟೀಲ್.—ವಾರಸುದಾರರಿದ್ದಾರೆ. ಬೇರೆ ಬೇರೆ ಕಂಪೆನಿಗಳಿವೆ. ಕೆಲವು ವ್ಯಕ್ತಿಗಳೂ ಇರಬಹುದು. ಆದರೂ ಅವಧಿಯೊಳಗೆ ಮಾಹಿತಿ ತರಿಸಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ ಅಷ್ಟೇ.

Sri S. D. KOTHAVALE.—What steps have Government taken for the purpose of encouraging large scale rubber plantation in the State ?

Sri K. F. PATIL.—Last year nothing was done.

Sri J. B. MALLARADHYA.—Are the Government aware that the Government of India is trying to set up a factory in Bareilli for the manufacture of synthetic rubber and in view of this, will the Government of Mysore take steps to enlarge the area of rubber cultivation so as to minimise the possibility of the Government of India doing this kind of thing ?

Sri K. F. PATIL.—I have no idea of what you are saying. but anyway I will look into it.

Sri J. B. MALLARADHYA.—Will the Government take determined steps to expand the rubber cultivation which is distinctly advantageous to our State ?

Sri K. F. PATIL.—The idea is welcome, but I cannot say definitely what I could do now unless I get statistics.

Dr. R. NAGAN GOWDA.—Will the Government state the amount of raw rubber that is produced every year out of these plantations ?

Sri K. F. PATIL.—The quantity of raw rubber produced is 9,91,864 lbs. for 58 and 9,22,201 lbs. for 57.

Irrigation under Kandaka Anicut in Puttur Taluk.

*Q.—509. Sri S. SUBBAYA NAIK (Puttur).—

Will the Government be pleased to state :—

(*a*) when the Anicut was constructed on the river near Kandaka (on the border of Ubardka, Mitter village) in Puttur Taluk ;

(*b*) the total amount of expenditure incurred towards the construction of that Anicut ;

(*c*) out of the above the amount of expenditure met by them and by the public (separate figures may be furnished) ;

(*d*) the acreage of land likely to be irrigated thereunder ;

(*e*) the acreage of land submerged thereunder ?

A.—Sri H. M. CHANNABASAPPA (Minister for Public Works and Electricity).—

(*a*) The work was started in June 1955 and completed in August 1957.

(*b*) Rs. 28,665.

(*c*) The work was executed at Government cost.

(*d*) 50 acres.

(*e*) Information is not readily available, it will be placed on the table of the House soon after it is rceeived.

ಶ್ರೀ ಎಸ್. ಸುಬ್ಬಯ್ಯನಾಯಕ್.—ಡಿ ಗೆ ಉತ್ತರವಾಗಿ ನೀರಾವರಿಯಾಗುವ ಜಮೀನು ಐವತ್ತು ಎಕರೆಗಳೆಂದು ಹೇಳಿದ್ದೀರಿ. ಇದರಲ್ಲಿ ಭತ್ತವನ್ನು ಎಷ್ಟು ಎಕರೆಗಳಲ್ಲಿ ಮಾಡಬಹುದು ಮತ್ತು ಅಡಕೆಯನ್ನು ಎಷ್ಟು ಎಕರೆಗಳಲ್ಲಿ ಮಾಡಬಹುದು ?

ಶ್ರೀ ಎಮ್. ಎನ್. ನಾಗನೂರು.—ಇದರ ಪೂರ್ತಿಯಾದ ವಿವರಗಳು ನನ್ನ ಮುಂದೆ ಇಲ್ಲಿಲ್ಲ.

ಶ್ರೀ ಎಸ್. ಸುಬ್ಬಯ್ಯನಾಯಕ್.—ಈ ಅಣಿಕಟ್ಟಿನ ನೀರನ್ನು ಉಪಯೋಗಿಸುವವರು ಸರಕಾರಕ್ಕೆ ತೆರಿಗೆಯನ್ನು ಕೊಡಬೇಕಾಗಿದೆಯೇ ?

ಶ್ರೀ ಎಂ. ಎನ್. ನಾಗನೂರು.—ಹೌದು.

ಶ್ರೀ ಎಸ್. ಸುಬ್ಬಯ್ಯನಾಯಕ್.—ಅಣೆಕಟ್ಟನ್ನು ಮಾಡುವಾಗಲೆಲ್ಲ ಅಣೆಯ ಪಕ್ಕದಲ್ಲಿ ದೊಡ್ಡ ದೊಡ್ಡ ಮರದ ದಿಮ್ಮಿಗಳು, ಬದಿರುಗಳು ಇತ್ಯಾದಿಯಾದ ಕನಕಡ್ಡಿಗಳು ತುಂಬಾ ಬಿದ್ದಿರುವುದನ್ನು ತೆಗೆಯುವ ಜವಾಬ್ದಾರಿ ಯಾರಿಗಿದೆ ?

ಶ್ರೀ ಎಂ. ಎನ್. ನಾಗನೂರು.—ಇಲ್ಲಿಯವರೆಗೆ ಆ ರೀತಿ ನಡೆದಿದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿಲ್ಲ. ಹಾಗಿದ್ದರೆ ಅದಕ್ಕೆ ತಕ್ಕ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತೇವೆ.